# ಜಿಲ್ಲಾ ಯೋಜನಾ ವಿಭಾಗ

**ವಿಕೇಂದ್ರೀಕೃತ ಯೋಜನೆ**

ರಾಷ್ಟ್ರೀಯ ಮಾದರಿಗೆ ಅನುಗುಣವಾಗಿ ಕರ್ನಾಟಕದಲ್ಲಿ ವಿಕೇಂದ್ರೀಕೃತ ಆಡಳಿತವನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ನ್ನು ಜಾರಿಗೊಳಿಸಲಾಗಿರುತ್ತದೆ "ಗ್ರಾಮ ಸ್ವರಾಜ್" ಪರಿಕಲ್ಪನೆಯನ್ನು ವಾಸ್ತವವಾಗಿ ರೂಪಾಂತರಿಸಲು ಹಾಗೂ ವಿಕೇಂದ್ರೀಕೃತ ಆಡಳಿತ ಮತ್ತು ಅಭಿವೃದ್ಧಿಯನ್ನು ಸಂವಿಧಾನದ 73 ನೇ ತಿದ್ದುಪಡಿಗೆ ಅನುಗುಣವಾಗಿ ಆಚರಣೆಗೆ ತರಲು ಪಂಚಾಯತ್ ರಾಜ್ ಸಂಸ್ಥೆಗಳ ಅಧಿನಿಯಮವನ್ನು ಜಾರಿಗೆ ತಂದಿರುವುದರಲ್ಲಿ ಕರ್ನಾಟಕವು ಮೊದಲ ರಾಜ್ಯವಾಗಿರುತ್ತದೆ. ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕಿನಲ್ಲಿ ತಾಲೂಕು ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯತ್ ಈ ರೀತಿಯಾಗಿ ಮೂರು–ಹಂತದ ರಚನೆಯನ್ನು ರೂಪಿಸಲಾಗಿರುತ್ತದೆ ಪಂಚಾಯತ್ ರಾಜ್ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು 1993 ರ ಕಾಯ್ದೆಯ 309 ನೇ ಪರಿಚ್ಛೇಧ ಅನುವು ಮಾಡಿಕೊಡುತ್ತದೆ. ಪ್ರತಿ ಜಿಲ್ಲೆಯ ಜಿಲ್ಲಾ ಯೋಜನಾ ಸಮಿತಿಗಳನ್ನು ರೂಪಿಸಲು ಈ ಅಧಿನಿಯಮದ ಪರಿಚ್ಛೇಧ 310 ಕಡ್ಡಾಯಗೊಳಿಸಿದ್ದು, ಭೌತಿಕ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅಗತ್ಯತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮಟ್ಟವನ್ನು ಹಾಗೂ ಪ್ರಾದೇಶಿಕವಾಗಿ ಯೋಜನೆಗಳ ಅಗತ್ಯತೆಗಳನ್ನು ಪರಿಗಣಿಸಿ. ಪಂಚಾಯತ್ ರಾಜ್ ಸಂಸ್ಥೆಗಳಿಂದ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಂದ ಸಿದ್ಧಪಡಿಸಲಾದ ಯೋಜನೆಗಳನ್ನು ಜಿಲ್ಲೆಯ ಕರಡು ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು ಈ ಸಮಿತಿಗಳು ಏಕೀಕರಿಸುವ ಅಗತ್ಯವಿರುತ್ತದೆ.

**ವಿಕೇಂದ್ರೀಕೃತ ಯೋಜನೆಗೆ ಸಂಬಂಧಿಸಿದ ಅನುಕ್ರಮ ಘಟನೆಗಳು**

- ಜಿಲ್ಲೆಗಳಿಗೆ ಅನುದಾನ ಹಂಚಿಕೆಗಳ ಲೆಕ್ಕಾಚಾರ ಮಾಡಿ, ಜಿಲ್ಲಾ ವಲಯ ಯೋಜನೆಯ ಗಾತ್ರವನ್ನು ನಿರ್ಧರಿಸುವುದು.
- ಆಯಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನೆಯನ್ನು ರೂಪಿಸುವುದಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನಗಳನ್ನು ಹೊರಡಿಸುವುದು.
- ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮತ್ತು ಸಂಬಂಧಪಟ್ಟ ಸಂಸ್ಥೆಯಿಂದ ಅನುಮೋದನೆ ಪಡೆಯುವುದರ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳು ಕರಡು ಯೋಜನೆಯನ್ನು ರೂಪಿಸುವುದು.
- ಜಿಲ್ಲೆಯ ಪಂಚಾಯತ್‌ನ ಅಧಿಕಾರಿಗಳು ಮತ್ತು ಇಲಾಖೆಗಳ ಮುಖ್ಯಸ್ಥರೊಂದಿಗೆ ಸಂವಹನ ಮಾಡುವ ಮೂಲಕ ರಾಜ್ಯ ಮಟ್ಟದಲ್ಲಿ ಕರಡು ಯೋಜನೆಯನ್ನು ಅಂತಿಮಗೊಳಿಸುವುದು.
- ಜಿಲ್ಲೆಯ ವಲಯ ಯೋಜನೆಯನ್ನು ರಾಜ್ಯ ಯೋಜನೆಯೊಂದಿಗೆ ಸಂಯೋಜಿಸುವುದು.
- ಆಯವ್ಯಯ ಸಂಬಂಧಿ ಲಿಂಕ್‌ಡಾಕ್ಯೂಮೆಂಟ್ ಅನ್ನು ಹೊರತರುವುದು
- ಅವರಿಗೆ ಜಿಲ್ಲಾ ಪಂಚಾಯತ್‌ಗಳು, ತಾಲೂಕು ಪಂಚಾಯತ್‌ಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ, ನಿಯೋಜಿಸಲಾದ ಚಟುವಟಿಕೆಗಳಿಗೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವುದು.
- ಸಂಬಂಧಿಸಿದ ಶಾಶ್ವತ ಸಮಿತಿಗಳ ಮುಂದೆ ಪರಿಗಣನೆಗೆ ಕ್ರೋಡಿಕರಿಸಿದ ಯೋಜನೆಗಳನ್ನು ಮಂಡಿಸುವುದು.
- ಯೋಜನೆಗಳನ್ನು ಕ್ರೋಡೀಕರಿಸುವುದು ಮತ್ತು ಅವುಗಳನ್ನು ಸಾಮಾನ್ಯ ಮಂಡಳಿ ಮತ್ತು ಜಿಲ್ಲಾ ಯೋಜನಾ ಸಮಿತಿಯ ಮುಂದೆ ಮಂಡಿಸುವುದು.
- ಅನುಷ್ಠಾನ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುವುದು.

**ಚಟುವಟಿಕೆಯ ನಕ್ಷೆ.**

ಸಂವಿಧಾನದ ಹನ್ನೊಂದನೇ ಅನುಚ್ಛೇದದಂತೆ ವಿವಿಧ ಹಂತಗಳ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲು ಚಟುವಟಿಕೆ ನಕ್ಷೆಯನ್ನು ಸಿದ್ಧಪಡಿಸಲಾಗಿರುತ್ತದೆ. ಒಂದು ನಿರ್ದಿಷ್ಟ ಪಂಚಾಯತ್ ಮಟ್ಟದಲ್ಲಿ ಏನು ಮಾಡಬೇಕೆಂಬುದನ್ನು ಆ ಹಂತದಲ್ಲಿ ಮಾತ್ರ ಮಾಡಬೇಕೆಂಬುದನ್ನು ಇದು ಖಚಿತಪಡಿಸುತ್ತದೆ. ಇದರಿಂದಾಗಿ ಮಧ್ಯಸ್ಥಿಕೆಗಳಿಲ್ಲದೆ ಪಂಚಾಯತ್ ರಾಜ್ ಸಂಸ್ಥೆಗಳು ಹೆಚ್ಚಿನ ಅಧಿಕಾರವನ್ನು ಚಲಾಯಿಸಿ ತಮ್ಮ ಕಾರ್ಯಗಳನ್ನು ಹೆಚ್ಚು ಸ್ವತಂತ್ರವಾಗಿ ಕೈಗೊಳ್ಳಲು ಸಾಧ್ಯವಾಗಿರುತ್ತದೆ. ಚಟುವಟಿಕೆ ನಕ್ಷೆಯ ಆಧಾರದ ಮೇಲೆ, ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಿಭಿನ್ನ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು ಮಂಜೂರು ಮಾಡಲಾಗಿರುತ್ತದೆ.

**ಜಿಲ್ಲಾ ಯೋಜನಾ ಸಮಿತಿಗಳು**

ಜಿಲ್ಲೆಯ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಸಿದ್ಧಪಡಿಸಿದ ಯೋಜನೆಗಳನ್ನು ಒಟ್ಟುಗೂಡಿಸಲು ಮತ್ತು ಒಟ್ಟಾರೆಯಾಗಿ ಜಿಲ್ಲೆಯ ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಲು ಜಿಲ್ಲೆಯ ಜಿಲ್ಲಾ ಯೋಜನಾ ಸಮಿತಿಗೆ ಸಂವಿಧಾನದ 243 (ಜೆಡ್‌ಡಿ) ಅನುಚ್ಛೇದವು ಅಧಿಕಾರವನ್ನು ಒದಗಿಸಿರುತ್ತದೆ. ಪ್ರಾದೇಶಿಕ ಯೋಜನೆ, ಪರಿಸರ ಸಂರಕ್ಷಣೆ, ಮೂಲಸೌಕರ್ಯದ ಸಮಗ್ರ ಅಭಿವೃದ್ಧಿ ಮುಂತಾದ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ನಡುವಿನ ಸಾಮಾನ್ಯ ಆಸಕ್ತಿಯ ಪರಿಗಣನೆಗೆ ಸಂಬಂಧಿಸಿದ ವಿಷಯಗಳನ್ನು ಪರಿಗಣಿಸಲು ಕರಡು ಯೋಜನೆಯನ್ನು ಅಂತಿಮಗೊಳಿಸಬೇಕೆಂದು ಉದ್ದೇಶಿಸಲಾಗಿದೆ.

**ಜಿಲ್ಲಾ ಯೋಜನಾ ವಿಭಾಗದ ಚಟುವಟಿಕೆಗಳು**

ಜಿಲ್ಲಾ ಪಂಚಾಯತ್‌ನ ಯೋಜನಾ ಘಟಕಗಳಿಗೆ ಜಿಲ್ಲೆಯ ಯೋಜನೆಗಳನ್ನು ರೂಪಿಸಲು. ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಜಿಲ್ಲಾ ಯೋಜನಾ ವಿಭಾಗವು ಮಾರ್ಗದರ್ಶನ ಮಾಡುತ್ತದೆ. ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ರಾಜ್ಯ ಮಟ್ಟದಲ್ಲಿ ಸಂಯೋಜಿಸುವುದು, ಜಿಲ್ಲಾ ಪಂಚಾಯತ್‌ಗಳ ಯೋಜನೆಗಳನ್ನು ನಿರ್ಧರಿಸುವುದು, ಜಿಲ್ಲಾ ಪಂಚಾಯಿತಿಗಳಿಗೆ ನಿಗದಿತ ಮಾನದಂಡಗಳ ಆಧಾರದ ಮೇಲೆ ಹಣವನ್ನು ವಿತರಿಸುವುದು, ಕಾರ್ಯಕ್ರಮಗಳಿಗೆ ಹಣವನ್ನು ಕಾಯ್ದಿರಿಸುವುದು, ಜಿಲ್ಲಾ ಪಂಚಾಯತ್ ಯೋಜನೆಗಳನ್ನು ರಾಜ್ಯ ಯೋಜನೆಯೊಂದಿಗೆ ಸಂಯೋಜಿಸುವುದು ಹಾಗೂ ಜಿಲ್ಲಾ ಪಂಚಾಯತ್‌ನ ಆಯವ್ಯಯ ಸಂಬಂಧಿತ ಜಿಲ್ಲಾವಾರು ಮತ್ತು ಯೋಜನಾವಾರು ಹಣ ವಿತರಣೆಯ ದಾಖಲೆಯನ್ನು ಮಾಡುವುದು ಕಾರ್ಯಗಳ ಮುಖ್ಯ ಅಂಶಗಳಾಗಿರುತ್ತದೆ. ಜಿಲ್ಲಾ ಪಂಚಾಯತ್‌ಗಳಿಗೆ ವಾರ್ಷಿಕ ಯೋಜನೆಗಳನ್ನು ರೂಪಿಸಲು ಮಾರ್ಗದರ್ಶನ ನೀಡಲಾಗಿರುತ್ತದೆ. ಸಿಬ್ಬಂದಿಗಳ ಸ್ಥಾನ, ಅನುದಾನಿತ ಸಂಸ್ಥೆಗಳು, ಕಟ್ಟಡ ಯೋಜನೆಗಳು, ನೀರು ಸರಬರಾಜು ಯೋಜನೆಗಳು, ಭೌತಿಕ ಗುರಿಗಳು ಮತ್ತು ಸಾಧನೆಗಳು, ಮಹಿಳಾ ಘಟಕ ಯೋಜನೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳು ಇತ್ಯಾದಿ ದಾಖಲೆಗಳಿಂದ ವಾರ್ಷಿಕ ಯೋಜನೆಗಳ ರೂಪರೇಖೆಯನ್ನು ಬೆಂಬಲಿಸುವ ಮಾಹಿತಿಗಾಗಿ 15 ನಮೂನೆಗಳನ್ನು ನಿಗದಿಪಡಿಸಲಾಗಿರುತ್ತದೆ.

ಯೋಜನೆಗಳನ್ನು ರೂಪಿಸಲು ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ:

- ವಿವಿಧ ಯೋಜನೆಗಳ ಅಡಿಯಲ್ಲಿ ಸಂಬಳ ಘಟಕ
- ವಸತಿ ನಿಲಯಗಳಂತಹ ಸಂಸ್ಥೆಗಳ, ವಿದ್ಯಾರ್ಥಿ ವೇತನಗಳ, ಅನುದಾನ ಸಂಸ್ಥೆಗಳಲ್ಲಿನ ಅನುದಾನ ಇತ್ಯಾದಿಗಳ ನಿರ್ವಹಣೆ.
- ಕೇಂದ್ರ ಪ್ರಾಯೋಜಿತ ಯೋಜನೆಗಳ ರಾಜ್ಯದ ಪಾಲು
- ಗ್ರಾಮ ಪಂಚಾಯತ್‌ಗಳಿಗೆ ಶಾಸನಬದ್ಧ ಅನುದಾನಗಳು
- ವಿಶೇಷ ಘಟಕ ಮತ್ತು ಬುಡಕಟ್ಟು ಉಪ ಯೋಜನೆಗಳು (ಪಜಾಉಯೋ ಮತ್ತು ಬುಉಯೋ)
- ಮಾನದಂಡಗಳ ಪ್ರಕಾರ ಕಟ್ಟುನಿಟ್ಟಾಗಿ ಮತ್ತು ನಿಜವಾಗಿಯೂ ಅಗತ್ಯವಾದ ಕಾಮಗಾರಿಗಳ / ಯೋಜನೆಗಳ

ಸಂಖ್ಯೆ;

- ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷಿತ ಕಾಮಗಾರಿಗಳ ಸಂಖ್ಯೆ
- ಎರಡು ವರ್ಷಗಳಿಂದ ಮತ್ತು ಎರಡು ವರ್ಷಗಳಿಗಿಂತ ಮೀರಿ ಬಾಕಿ ಉಳಿದಿರುವ ಕಾಮಗಾರಿಗಳ ಸಂಖ್ಯೆ;
- ಬಾಕಿ ಉಳಿದಿರುವ ಕೆಲಸಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ನಿಧಿಗಳು;
- ಯೋಜನೆಯಲ್ಲಿ ಒದಗಿಸಲಾದ ನಿಧಿಗಳು;
- ಭೂಮಿ ಲಭ್ಯತೆ ಸೇರಿದಂತೆ ಪ್ರತಿ ಕಾಮಗಾರಿಗೆ ಅನುಮೋದನೆ ಮತ್ತು ಅಂದಾಜಿನ ಸಿದ್ಧತೆಯ ಹಂತ; ಮತ್ತು
- ಪ್ರತಿ ಹೊಸ ಕಾಮಗಾರಿಗೆ ಒದಗಿಸಲಾದ ಮೊತ್ತ.

ಪಂಚಾಯತ್ ರಾಜ್ ಸಂಸ್ಥೆಗಳಿಗಾಗಿ ವಾರ್ಷಿಕ ಯೋಜನೆಗಳನ್ನು ತಯಾರಿಸುವ ಕೆಲಸವನ್ನು ಸಂಪೂರ್ಣವಾಗಿ ಎಸ್‌ಕ್ಯೂಎಲ್ ಗಣಕಯಂತ್ರದಲ್ಲಿ ವಿಕಸನಗೊಂಡಿರುವ **e–PRI's allocations** ಸಾಫ್ಟ್‌ವೇರ್ ಮೂಲಕ ಸಂಪೂರ್ಣವಾಗಿ ಗಣಕೀಕೃತಗೊಳಿಸಲಾಗಿದೆ ಮತ್ತು ಕಾರ್ಯಗತಗೊಳಿಸಲಾಗಿದೆ. ಯೋಜನಾ ಪ್ರಕ್ರಿಯೆಗಾಗಿ ಮತ್ತು ಸೂಕ್ತವಾಗಿ ಪೂರ್ಣಗೊಂಡ ಯೋಜನಾ ಪ್ರಸ್ತಾವನೆಗಳನ್ನು, 'ಜಿಲ್ಲಾ ಪಂಚಾಯತ್‌ನ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳಿಗಾಗಿ' ಬೆಂಬಲಿತ ಅಂಕಿಅಂಶ ದತ್ತಾಂಶಗಳ ಜೊತೆಗೆ ಮುಂದಿನ ಪ್ರಕ್ರಿಯೆಗಾಗಿ ಹಾಗೂ ಆಯವ್ಯಯ ಸಂಬಂಧಿತ ದಾಖಲೆಯನ್ನು ತಯಾರಿಸಲು ದತ್ತಾಂಶ ಆಧಾರಿತ ಜಿಲ್ಲೆಗಳಿಗೆ ಮೇಲ್ ಕಳುಹಿಸಲಾಗುತ್ತದೆ.

ಈ ವಿಭಾಗವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ, ನಗರಾಭಿವೃದ್ಧಿ ಮತ್ತು ಗೃಹ ಇಲಾಖೆಗಳ ಯೋಜನಾ ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಸಹಕರಿಸಲು ಸಂಪರ್ಕವನ್ನು ಕಲ್ಪಿಸುವ (ನೋಡಲ್) ವಿಭಾಗವಾಗಿರುತ್ತದೆ. ಈ ಇಲಾಖೆಗಳ ಮತ್ತು ಇತರ ಇಲಾಖೆಗಳ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರಲ್ಲಿ ಅಭಿಪ್ರಾಯವನ್ನು ಸಹ ಒದಗಿಸುತ್ತಿದೆ.

**ವಾರ್ಷಿಕ ಯೋಜನೆ, 2021–22**

2021–22 ರಲ್ಲಿ ರಾಜ್ಯದ ಯೋಜನೆಗಳ ಒಟ್ಟಾರೆ ಗಾತ್ರ ರೂ. **246207.00** ಕೋಟಿಗಳ ಪೈಕಿ ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನವು ರೂ.**41310.45** ಕೋಟಿಗಳಾಗಿದ್ದು, ಒಟ್ಟಾರೆ ಅನುದಾನದ ಶೇ.16.77 ರಷ್ಟಾಗಿರುತ್ತದೆ.

**2021–22ರ ಸಾಲಿನ ಜಿಲ್ಲಾ ವಲಯದ ಯೋಜನೆಗಳ ಆಯವ್ಯಯವು ಕೆಳಕಂಡಂತಿವೆ:**

(ರೂ. ಕೋಟಿಗಳಲ್ಲಿ)

| ವಲಯ | ಆಯವ್ಯಯ |
|---|---|
| **ರಾಜ್ಯ** | **246207.00** |
| **ಪಂಚಾಯತ್ ರಾಜ್ ಸಂಸ್ಥೆಗಳು** | |
| ಜಿಲ್ಲಾ ಪಂಚಾಯತ್ | 12785.82 |
| ತಾಲ್ಲೂಕು ಪಂಚಾಯತ್ | 23482.82 |
| ಗ್ರಾಮ ಪಂಚಾಯತ್ | 5041.79 |
| **ಒಟ್ಟು ಪಂಚಾಯತ್ ರಾಜ್ ಸಂಸ್ಥೆಗಳ ಅನುದಾನ** | **41310.45** |
| ಒಟ್ಟು ರಾಜ್ಯದ ಅನುದಾನಕ್ಕೆ ಹೋಲಿಸಿದಾಗ ಪಂಚಾಯತ್ ರಾಜ್ ಸಂಸ್ಥೆಗಳ ಶೇಕಡಾವಾರು ಅನುದಾನ | 16.77% |

2021–22ನೇ ಸಾಲಿಗೆ ಜಿಲ್ಲಾವಲಯದಡಿ ವಲಯವಾರು ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಗಧಿಪಡಿಸಿದ ಅನುದಾನದ ವಿವರಗಳು.

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ವಲಯ | ಜಿಲ್ಲಾ ಪಂಚಾಯತ್ | ತಾಲ್ಲೂಕ್ ಪಂಚಾಯತ್ | ಗ್ರಾಮ ಪಂಚಾಯತ್ | ಒಟ್ಟು |
|---|---|---|---|---|---|
| 1 | 2 | 3 | 4 | 5 | |
| 1 | ಲೋಕೋಪಯೋಗಿ ಕಾಮಗಾರಿಗಳು | 19924.18 | - | - | 19924.18 |
| 2 | ಸಾಮಾನ್ಯ ಶಿಕ್ಷಣ | 453240.41 | 1604608.60 | - | 2057849.01 |
| 3 | ಕ್ರೀಡೆ ಮತ್ತು ಯುವಜನ ಸೇವೆಗಳು | 3371.59 | - | - | 3371.59 |
| 4 | ಕಲೆ, ಮತ್ತು ಸಂಸ್ಕೃತಿ, | 265 | - | 4843.44 | 5108.44 |
| 5 | ವೈದ್ಯಕೀಯ ಮತ್ತು ಸಾರ್ವಜನಿಕ ಆರೋಗ್ಯ | 1517112.40 | 5479.25 | - | 162591.65 |
| 6 | ಕುಟುಂಬ ಕಲ್ಯಾಣ | 64746.68 | - | - | 64746.68 |
| 7 | ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ | - | 616.21 | 43203.77 | 43819.98 |
| 8 | ವಸತಿ | - | - | 50000.00 | 50000.00 |
| 9 | ಪರಿಶಿಷ್ಟ ಜಾತಿಗಳ,ಪರಿಶಿಷ್ಟ ಪಂಗಡಗಳ ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ | 213547.57 | 92022.86 | - | 305570.43 |
| 10 | ಕಾರ್ಮಿಕ ಮತ್ತು ಉದ್ಯೋಗ | 1173.34 | 45.00 | 422.00 | 1640.34 |
| 11 | ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ | 5050.92 | 161961.27 | - | 167012.19 |
| 12 | ಪೌಷ್ಟಿಕ ಅಹಾರ | - | 197319.20 | - | 197319.20 |
| 13 | ಸಸ್ಯ ಸಂಗೋಪನೆ | 23861.76 | 12825.61 | - | 36687.37 |
| 14 | ಭೂಸಾರ ಮತ್ತು ಜಲ ಸಂರಕ್ಷಣೆ | 3539.78 | 91.78 | - | 3857.96 |
| 15 | ಪಶು ಸಂಗೋಪನೆ | 13156.03 | 61569.02 | - | 74725.05 |
| 16 | ಮೀನುಗಾರಿಕೆ | 3857.96 | - | - | 3857.96 |
| 17 | ಅರಣ್ಯ ಮತ್ತು ವನ್ಯ ಜೀವನ | 18477.12 | - | - | 18477.12 |
| 18 | ಸಹಕಾರ | 243.61 | 173.72 | - | 417.33 |
| 19 | ಗ್ರಾಮೀಣಾಭಿವೃದ್ದಿಗಾಗಿ ವಿಶೇಷ ಕಾರ್ಯಕ್ರಮ | - | - | 22000.00 | 22000.00 |
| 20 | ಗ್ರಾಮೀಣ ಉದ್ಯೋಗ | 181600.00 | - | - | 181600.00 |
| 21 | ಇತರೆ ಗ್ರಾಮೀಣಾ ಅಭಿವೃದ್ಧಿ ಕಾರ್ಯಕ್ರಮಗಳು | 53679.79 | 211455.70 | 383710.72 | 648846.21 |
| 22 | ಸಣ್ಣ ನೀರಾವರಿ | 3113.02 | - | | 3113.02 |
| 23 | ಗ್ರಾಮೀಣ ಮತ್ತು ಸಣ್ಣ ಉದ್ಯಮಗಳು | 13839.39 | 114.66 | - | 13954.05 |
| 24 | ಉದ್ಯಮಗಳು | 16.00 | - | - | 16.00 |
| 25 | ರಸ್ತೆ ಮತ್ತು ಸೇತುವೆಗಳು | 41873.00 | - | - | 41873.00 |
| 26 | ಇತರೆ ವಿಜ್ಞಾನ ಸಂಶೋದನೆ | 198.70 | - | - | 198.70 |
| 27 | ಸಚಿವಾಲಯದ ಆರ್ಥಿಕ ಸೇವೆಗಳು | 2493.89 | - | - | 2493.89 |
| 28 | ಇತರೆ ಸಾಮಾನ್ಯ ಆರ್ಥಿಕ ಸೇವೆಗಳು | 200.05 | - | - | 200.05 |
| | ಒಟ್ಟು | 1278582.19 | 2348282.88 | 504179.93 | 4131045.00 |

**2021-22** ನೇ ಸಾಲಿನಲ್ಲಿ ಜಿಲ್ಲಾ ವಲಯದಡಿ ಪಂಚಾಯತ್‌ರಾಜ್ ಸಂಸ್ಥೆವಾರು ಜಿಲ್ಲಾವಾರು ನಿಗಧಿಪಡಿಸಿದ ಅನುದಾನದ ವಿವರಗಳು

(ರೂ. ಲಕ್ಷಗಳಲ್ಲಿ)

| ಕ್ರಸಂ | ಜಿಲ್ಲೆ | ಜಿಲ್ಲಾ ಪಂಚಾಯತ್ | ತಾಲ್ಲೂಕ್ ಪಂಚಾಯತ್ | ಗ್ರಾಮ ಪಂಚಾಯತ್ | ಒಟ್ಟು |
|---|---|---|---|---|---|
| 1 | ಬೆಂಗಳೂರು (ನಗರ) | 58034.65 | 93902.57 | 15.00 | 151952.22 |
| 2 | ಬೆಂಗಳೂರು (ಗ್ರಾಮಾಂತರ) | 16488.32 | 40530.61 | 4.51 | 57023.44 |
| 3 | ಚಿತ್ರದುರ್ಗ | 39374.95 | 76997.65 | 36.00 | 116408.60 |
| 4 | ಕೋಲಾರ | 23092.76 | 63011.92 | 20.00 | 86124.68 |
| 5 | ಶಿವಮೊಗ್ಗ | 36535.49 | 79667.95 | 53.75 | 116257.19 |
| 6 | ತುಮಕೂರು | 53014.70 | 118063.62 | 110.00 | 171188.32 |
| 7 | ಮೈಸೂರು | 45153.68 | 95312.88 | 125.00 | 140591.56 |
| 8 | ಚಿಕ್ಕಮಗಳೂರು | 27679.53 | 55421.06 | 48.00 | 83148.59 |
| 9 | ದಕ್ಷಿಣ ಕನ್ನಡ | 31079.97 | 57446.49 | 19.00 | 88545.46 |
| 10 | ಹಾಸನ | 38676.50 | 81545.93 | 100.24 | 120322.67 |
| 11 | ಕೊಡಗು | 14416.22 | 19310.43 | 56.00 | 33782.65 |
| 12 | ಮಂಡ್ಯ | 31572.48 | 67385.65 | 114.00 | 99072.13 |
| 13 | ಬೆಳಗಾವಿ | 85214.77 | 180375.50 | 76.00 | 265666.27 |
| 14 | ವಿಜಯಪುರ | 47025.77 | 106171.18 | 131.00 | 153327.95 |
| 15 | ಧಾರವಾಡ | 32990.62 | 61568.60 | 13.48 | 94572.70 |
| 16 | ಉತ್ತರ ಕನ್ನಡ | 32426.74 | 73430.98 | 66.00 | 105923.72 |
| 17 | ಕಲಬುರಗಿ | 47267.49 | 111299.98 | 88.00 | 158655.47 |
| 18 | ಬಳ್ಳಾರಿ | 42762.82 | 102124.38 | 35.00 | 144922.20 |
| 19 | ಬೀದರ | 35142.05 | 80664.98 | 54.00 | 115861.03 |
| 20 | ರಾಯಚೂರು | 30758.36 | 81800.79 | 64.00 | 112623.15 |
| 21 | ದಾವಣಗೆರೆ | 35716.16 | 71687.46 | 35.00 | 107438.62 |
| 22 | ಚಾಮರಾಜನಗರ | 18190.62 | 37955.31 | 54.00 | 56199.93 |
| 23 | ಉಡುಪಿ | 19761.16 | 36507.35 | 47.00 | 56315.51 |
| 24 | ಬಾಗಲಕೋಟೆ | 37022.27 | 85722.33 | 10.00 | 122754.60 |
| 25 | ಗದಗ | 25568.70 | 45762.25 | 23.56 | 71354.51 |
| 26 | ಹಾವೇರಿ | 32596.22 | 70920.40 | 60.95 | 103577.57 |
| 27 | ಕೊಪ್ಪಳ | 24464.84 | 62528.03 | 30.00 | 87022.87 |
| 28 | ರಾಮನಗರ | 19012.50 | 43135.27 | 38.00 | 62185.77 |
| 29 | ಚಿಕ್ಕಬಳ್ಳಾಪುರ | 19100.80 | 53353.89 | 24.28 | 72478.97 |
| 30 | ಯಾದಗಿರಿ | 19509.52 | 48344.66 | 52.00 | 67906.18 |
| | ಇಡಿಗಂಟು (Lumpsum) | 258931.53 | 146332.78 | 502576.16 | 907840.47 |
| | **ಒಟ್ಟು** | **1278582.19** | **2348282.88** | **504179.93** | **4131045.00** |

ಒಟ್ಟು ರಾಜ್ಯದ ಅಯವ್ಯಯದಲ್ಲಿ ಜಿಲ್ಲಾವಲಯ ಕಾರ್ಯಕ್ರಮಗಳ ಅನುದಾನದ ಅನುಪಾತದ ವಿವರಗಳು.

(ರೂ.ಕೋಟಿಗಳಲ್ಲಿ)

| ವರ್ಷ | ರಾಜ್ಯ ಆಯವ್ಯಯ | ಜಿಲ್ಲಾ ವಲಯ | |
|---|---|---|---|
| | | ಅನುದಾನ | ಒಟ್ಟು ಆಯವ್ಯಯಕ್ಕೆ ಶೇಕಡಾವಾರು ಹಂಚಿಕೆ |
| 2017-18 (BE) | 186561.00 | 32794.34 | 17.58 |
| 2018-19 (BE) | 21844.00 | 37675.97 | 17.24 |
| 2019-20(BE) | 234153.00 | 39135.20 | 16.71 |
| 2020-21(BE) | 237893.00 | 41637.81 | 17.50 |
| 2021-22(BE) | 246207.00 | 41310.45 | 16.77 |